**ದಿನಾಂಕ ೧೧-೦೮-೦೯ ರಂದು ಮಧ್ಯಾಹ್ನ ೩.೦೦ ಗಂಟೆಗೆ ಅಧ್ಯಕ್ಷರ ಸರ್ಕಾರಿ ವಸತಿಗೃಹ ಹಂಚಿಕೆ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ) ಬೆಂಗಳೂರು ಇವರ ಕಚೇರಿ ಸಭಾಂಗಣದಲ್ಲಿ ನಡೆದ 'ಬಿ' ಗುಂಪಿನ ನೌಕರರ ವಸತಿಗ್ಯಹ ಹಂಚಿಕೆ ಸಮಿತಿ ಸಭೆಯ ನಡವಳಿಕೆ.**

**<u>ಹಾಜರಿದ್ದ ಸದಸ್ಯರು</u>**

| | | |
|---|---|---|
| ೧. | ಶ್ರೀ ಮೃತ್ಯುಂಜಯ ಸ್ವಾಮಿ.ಸಿ.<br>ಮುಖ್ಯ ಇಂಜಿನಿಯರ್<br>ಸಂಪರ್ಕ ಮತ್ತು ಕಟ್ಟಡಗಳು(ದ)<br>ಬೆಂಗಳೂರು | ಅಧ್ಯಕ್ಷರು |
| ೨. | ಶ್ರೀ ಬಿ.ನಂಜುಡೇಶ್ವರ<br>ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬೆಂಗಳೂರು | ಸದಸ್ಯರು |
| ೩. | ಶ್ರೀಮತಿ ಜಾಯ್ಸ್ ಸುರೇಂದ್ರ<br>ಜಂಟಿ ಕಾರ್ಯದರ್ಶಿ,<br>ಆಡಳಿತ ಮತ್ತು ಸುಧಾರಣಾ ಇಲಾಖೆ (ಸೇವೆಗಳು)<br>ಬೆಂಗಳೂರು | ಸದಸ್ಯರು |
| ೪. | ಶ್ರೀ ಕೆ.ಮೋಹನ್<br>ಅಧೀಕ್ಷಕ ಇಂಜಿನಿಯರ್<br>ಕಟ್ಟಡಗಳ ವೃತ್ತ,<br>ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**<u>ಸಭೆಯ ತೀರ್ಮಾನ</u>**

ಸಮಿತಿಯ ಸಭೆಯಂದು ಖಾಲಿ ಇರುವ ವಸತಿಗೃಹಗಳ ಸಂಖ್ಯೆ ೭೨
ಸಭೆಯ ಪ್ರಾರಂಭದಲ್ಲಿ ಅಧ್ಯಕ್ಷರು, ಸರ್ಕಾರಿ ವಸತಿಗೃಹ ಹಂಚಿಕೆ ಸಮಿತಿ ಬೆಂಗಳೂರು ರವರು ಸದಸ್ಯರನ್ನು ಸ್ವಾಗತಿಸಿದರು.

**<u>ಕಾರ್ಯಸೂಚಿ</u>**

| ಕ್ರ.ಸ | ಕಾರ್ಯಸೂಚಿ | ತೀರ್ಮಾನ |
|---|---|---|
| 1. | ನಿಯಮ ೮ರಡಿ ಹಂಚಿಕೆ ಬಗ್ಗೆ | ಸಭೆಗೆ ನಿಯಮ ೮ ರಡಿ ಹಂಚಿಕೆ ಕೋರಿ ೬ ಮನವಿಗಳು ಸ್ವೀಕೃತವಾಗಿರುತ್ತವೆ. ನಿಯಮ ೮ ರಡಿ ೧೦೦ ವಸತಿಗೃಹಗಳನ್ನು ಹಂಚಿಕೆ ಮಾಡಲು ಅವಕಾಶವಿದ್ದು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಹಂಚಿಕೆಯನ್ನು ೧೦೦ ರಿಂದ ೧೫೦ರ ವರೆಗೆ ಹೆಚ್ಚಿಸಿ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರಕ್ಕೆ ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾದಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಸರ್ಕಾರದಿಂದ ಅನುಮತಿ ಬಂದಿರುವುದಿಲ್ಲ. ಆದರೆ ನಿಯಮ ೮ ರಡಿ ವಸತಿಗೃಹ ಹಂಚಿಕೆ ಮಾಡುವ ಬಗ್ಗೆ ಸಾಕಷ್ಟು ಒತ್ತಡ ಇರುವುದರಿಂದ ೬ ವಸತಿಗೃಹಗಳನ್ನು ನಿಯಮ ೮ ರಡಿ ಹಂಚಿಕೆ ಮಾಡಿ, ಸದರಿ ವಿಷಯವನ್ನು ಸ್ಥಿರೀಕರಿಸಲು |

| | | |
|---|---|---|
| | | ಹಾಗೂ ನಿಯಮದಲ್ಲಿ ತಿದ್ದುಪಡಿ ತರಲು ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು. |
| 2. | ಸರ್ಕಾರಿ ವಸತಿಗೃಹ ಹಂಚಿಕೆ ಕೋರಿ ಶಿಫಾರಸ್ಸು ಪತ್ರಗಳು | ಸರ್ಕಾರಿ ವಸತಿಗೃಹಗಳನ್ನು ಜೇಷ್ಟತೆ ಇಲ್ಲದೆ ಹಂಚಿಕೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಸದರಿ ಪತ್ರಗಳನ್ನು ಪರಿಗಣಿಸಬಾರದೆಂದು ತೀರ್ಮಾನಿಸಲಾಯಿತು |
| 3. | ಜೇಷ್ಠತಾನುಸಾರ ಹಿಂದಿನ ಸಭೆಯಲ್ಲಿ ಹಂಚಿಕೆಯಾಗಿದ್ದು ವಿಳಾಸ ಬದಲಾವಣೆಯಿಂದ ವಸತಿಗೃಹ ಪಡೆಯದೇ ಇರುವವರ ಮನವಿಗಳು | ಜೇಷ್ಠತಾನುಸಾರ ಹಿಂದಿನ ಸಭೆಗಳಲ್ಲಿ ವಸತಿಗೃಹ ಹಂಚಿಕೆಯಾಗಿದ್ದು ವಿಳಾಸ ಬದಲಾವಣೆಯಿಂದ ವಸತಿಗೃಹ ಪಡೆಯದೇ ಇರುವ ಬಗ್ಗೆ ೪ ಮನವಿಗಳು ಸ್ವೀಕೃತವಾಗಿದ್ದು ಮರು ಹಂಚಿಕೆ ಮಾಡಲು ತೀರ್ಮಾನಿಸಲಾಯಿತು. |
| 4. | ಸರ್ಕಾರಿ ವಸತಿಗೃಹಗಳ ಹಂಚಿಕೆಯನ್ನು ವರ್ಗವಾರು ಜೇಷ್ಟತೆಯನ್ನು ಪರಿಗಣನೆಗೆ ತೆಗೆದುಕೊಂಡು ಜೇಷ್ಟತಾನುಸಾರ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು (ಅನುಬಂಧ-೨) | |

ಅಧ್ಯಕ್ಷರು ಹಾಗೂ ಮುಖ್ಯ ಇಂಜಿನಿಯರ್
ಸಂಪರ್ಕ ಮತ್ತು ಕಟ್ಟಡಗಳು(ದ)
ಬೆಂಗಳೂರು

ಸದಸ್ಯರು ಹಾಗೂ ಬೆಂಗಳೂರು ನಗರ
ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕಸಹಾಯಕರು,
ಬೆಂಗಳೂರು

ಸದಸ್ಯರು ಹಾಗೂ ಜಂಟಿ ಕಾರ್ಯದರ್ಶಿ,
ಆಡಳಿತ ಮತ್ತು ಸುಧಾರಣೆ ಇಲಾಖೆ (ಸೇವೆಗಳು),
ಬೆಂಗಳೂರು

ಸದಸ್ಯ ಕಾರ್ಯದರ್ಶಿ ಹಾಗೂ
ಅಧೀಕ್ಷಕ ಇಂಜಿನಿಯರ್, ಕಟ್ಟಡಗಳ ವೃತ್ತ,
ಬೆಂಗಳೂರು

**ದಿನಾಂಕ ೦೧-೦೮-೦೯ ರಂದು ಮಧ್ಯಾಹ್ನ ೩.೧೫ ಗಂಟೆಗೆ ಅಧ್ಯಕ್ಷರು ಸರ್ಕಾರಿ ವಸತಿಗೃಹ ಹಂಚಿಕೆ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದ) ಬೆಂಗಳೂರು ಇವರ ಕಚೇರಿ ಸಭಾಂಗಣದಲ್ಲಿ ನಡೆದ ಸಿ ಮತ್ತು ಡಿ ಗುಂಪಿನ ನೌಕರರ ವಸತಿಗೃಹ ಹಂಚಿಕೆ ಸಮಿತಿ ಸಭೆಯ ನಡವಳಿಕೆ.**

**<u>ಹಾಜರಿದ್ದ ಸದಸ್ಯರು</u>**

| | | |
|---|---|---|
| 1. | ಶ್ರೀ ಮೃತ್ಯುಂಜಯ ಸ್ವಾಮಿ.ಸಿ.<br>ಮುಖ್ಯ ಇಂಜಿನಿಯರ್<br>ಸಂಪರ್ಕ ಮತ್ತು ಕಟ್ಟಡಗಳು(ದ)<br>ಬೆಂಗಳೂರು | ಅಧ್ಯಕ್ಷರು |
| 2. | ಶ್ರೀ ಬಿ.ನಂಜುಡೇಶ್ವರ<br>ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು, ಬೆಂಗಳೂರು | ಸದಸ್ಯರು |
| 3. | ಶ್ರೀ ಭೈರಪ್ಪ ಎಲ್, ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ<br>ಬೆಂಗಳೂರು | ಸದಸ್ಯರು |
| 4. | ಶ್ರೀ ಕೆ.ಮೋಹನ್, ಅಧೀಕ್ಷಕ ಇಂಜಿನಿಯರ್<br>ಕಟ್ಟಡಗಳ ವೃತ್ತ,<br>ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**<u>ಸಭೆಯ ತೀರ್ಮಾನ</u>**

ಸಮಿತಿಯ ಸಭೆಯಂದು ಖಾಲಿ ಇರುವ ವಸತಿಗೃಹಗಳ ಸಂಖ್ಯೆ ೮೯

ಸಭೆಯ ಪ್ರಾರಂಭದಲ್ಲಿ ಅಧ್ಯಕ್ಷರು, ಸರ್ಕಾರಿ ವಸತಿಗೃಹ ಹಂಚಿಕೆ ಸಮಿತಿ ಬೆಂಗಳೂರು ರವರು ಸದಸ್ಯರನ್ನು ಸ್ವಾಗತಿಸಿದರು

**<u>ಕಾರ್ಯಸೂಚಿ</u>**

| ಕ್ರ ಸಂ | ಕಾರ್ಯಸೂಚಿ | ತೀರ್ಮಾನ |
|---|---|---|
| 1. | ನಿಯಮ ೮ರಡಿ ಹಂಚಿಕೆ ಬಗ್ಗೆ | ನಿಯಮ ೮ ರಡಿ ವಸತಿಗೃಹಗಳನ್ನು ಹಂಚಿಕೆ ಮಾಡುವಂತೆ ಕೋರಿ ೬೦ ಮನವಿಗಳು ಸ್ವೀಕೃತವಾಗಿರುತ್ತವೆ. ನಿಯಮ ೮ ರಡಿ ೧೦೦ ವಸತಿಗೃಹಗಳನ್ನು ಹಂಚಿಕೆ ಮಾಡಲು ಅವಕಾಶವಿದ್ದು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಹಂಚಿಕೆಯನ್ನು ೧೦೦ ರಿಂದ ೧೫೦ರ ವರೆಗೆ ಹೆಚ್ಚಿಸಿ ನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಸರ್ಕಾರಕ್ಕೆ ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾದಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಸರ್ಕಾರದಿಂದ ಅನುಮತಿ ಬಂದಿರುವುದಿಲ್ಲ. ಆದರೆ ನಿಯಮ ೮ ರಡಿ ವಸತಿಗೃಹ ಹಂಚಿಕೆ ಮಾಡುವ ಬಗ್ಗೆ ಸಾಕಷ್ಟು ಒತ್ತಡ ಇರುವುದರಿಂದ ಕೆಲವೊಂದು ವಸತಿಗೃಹಗಳನ್ನು ನಿಯಮ ೮ ರಡಿ ಹಂಚಿಕೆ ಮಾಡಿ ಸದರಿ ವಿಷಯವನ್ನು ಸ್ಥಿರೀಕರಿಸಲು ಹಾಗೂ ನಿಯಮದಲ್ಲಿ ತಿದ್ದುಪಡಿ ತರಲು ಸರ್ಕಾರಕ್ಕೆ ಪತ್ರ ಬರೆಯಲು |

| | | |
|---|---|---|
| | | ತೀರ್ಮಾನಿಸಲಾಯಿತು. |
| 2. | ಸರ್ಕಾರಿ ವಸತಿಗೃಹ ಹಂಚಿಕೆ ಕೋರಿ ಶಿಫಾರಸ್ಸು ಪತ್ರಗಳು | ಸರ್ಕಾರಿ ವಸತಿಗೃಹಗಳನ್ನು ಜೇಷ್ಠತೆ ಇಲ್ಲದೆ ಹಂಚಿಕೆ ಮಾಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಸದರಿ ಪತ್ರಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂದು ತೀರ್ಮಾನಿಸಲಾಯಿತು. |
| 3. | ಜೇಷ್ಠತಾನುಸಾರ ಹಿಂದಿನ ಸಭೆಯಲ್ಲಿ ಹಂಚಿಕೆಯಾಗಿದ್ದು ವಿಳಾಸ ಬದಲಾವಣೆಯಿಂದ ವಸತಿಗೃಹ ಪಡೆಯದೇ ಇರುವವರ ಮನವಿ | ಜೇಷ್ಠತಾನುಸಾರ ಹಿಂದಿನ ಸಭೆಗಳಲ್ಲಿ ವಸತಿಗೃಹ ಹಂಚಿಕೆಯಾಗಿದ್ದು ವಿಳಾಸ ಬದಲಾವಣೆಯಿಂದ ವಸತಿಗೃಹ ಪಡೆಯದೇ ಇರುವ ೫ ಮನವಿಗಳು ಸ್ವೀಕೃತವಾಗಿದ್ದು ಮರು ಹಂಚಿಕೆ ಮಾಡಲು ತೀರ್ಮಾನಿಸಲಾಯಿತು. |
| 4. | ಸರ್ಕಾರಿ ವಸತಿಗೃಹದಲ್ಲಿ ವಾಸ ಮಾಡುತ್ತದ್ದು, ಸಿ ಗುಂಪಿನಿಂದ ಬಿ ಗುಂಪಿಗೆ ಬದಲಾವಣೆ ಕೋರಿರುವವರ ಮನವಿಗಳನ್ನು ಪರಿಗಣಿಸಿ ಬದಲಾವಣೆ ಮಾಡಲು ತೀರ್ಮಾನಿಸಲಾಯಿತು. | |

| **ಹೆಸರು ಮತ್ತು ಹುದ್ದೆ** | **ಹಾಲಿ ವಾಸಿಸುತ್ತಿರುವ ವಸತಿ ಗೃಹ ಸಂಖ್ಯೆ** | **ಬಿ ಗುಂಪಿನಲ್ಲಿ ಬದಲಾವಣೆ ಕೋರಿರುವ ವಸತಿಗೃಹ ಸಂಖ್ಯೆ** |
|---|---|---|
| ಶ್ರೀಧರ್.ಎಸ್.ಪಂಡಿತ್, ಆಪ್ತ ಸಹಾಯಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. | ೫೫/೧೧ ನಂದಿನಿ ಬಡಾವಣೆ | ಡಿಬಿ–೦೪ ಕಾವಲ್ ಬೈರಸಂದ್ರ |
| ಹೆಚ್.ವೂಲೆಪ್ಪ, ಭಾಷಾಂತರಕಾರರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು | ೫೫/೨ ನಂದಿನಿ ಬಡಾವಣೆ | ಡಿ–೧೫೮ ಜೀವನ್ ಭೀಮಾನಗರ |
| ಎಸ್.ಎಲ್.ಮಹಾಂತೇಗೌಡ, ಶಾಖಾಧಿಕಾರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. | ಹೆಚ್–೬ ರಾಜಾಜಿನಗರ | ಡಿ–೨೧ ಜೀವನ್ ಭೀಮಾನಗರ |

| | | |
|---|---|---|
| 5 | ಸರ್ಕಾರಿ ವಸತಿಗೃಹ ಹಂಚಿಕೆಗಾಗಿ ಕೈಬಿಟ್ಟುಹೋದ ಜೇಷ್ಠತೆಯನ್ನು ಪರಿಗಣಿಸುವ ಬಗ್ಗೆ ಮನವಿಗಳು | ಸಂಬಂಧಪಟ್ಟ ದಾಖಲೆಗಳನ್ನು ನಿಗದಿತ ಅವಧಿಯಲ್ಲಿ ಒದಗಿಸಿ ಜೇಷ್ಠತೆಯನ್ನು ನವೀಕರಣಗೊಳಿಸದೇ ಇರುವುದರಿಂದ ಈಗ ಸದರಿಯವರ ಹೆಸರನ್ನು ಹಳೆಯ ದಿನಾಂಕದಲ್ಲಿ ಪರಿಗಣಿಸಿ ಜೇಷ್ಠತೆಯಲ್ಲಿ ಸೇರಿಸಲು ನಿಯಮಗಳಲ್ಲಿ ಅವಕಾಶ ಇಲ್ಲದಿರುವುದರಿಂದ ಸದರಿಯವರ ಮನವಿಗಳನ್ನು ಪರಿಗಣಿಸಬಾರದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 6 | ಸರ್ಕಾರಿ ವಸತಿಗೃಹದಲ್ಲಿ ವಾಸ ಮಾಡುತ್ತಿದ್ದು ನಿವೃತ್ತಿಯ ನಂತರ ವಸತಿಗೃಹದಲ್ಲಿ ವಾಸ ಮುಂದುವರೆಸಲು ಕೋರಿರುವ ಮನವಿಗಳು | |

| **ಹಂಚಿಕೆದಾರನ ಹೆಸರು ಮತ್ತು ವಿಳಾಸ** | **ವಸತಿಗೃಹ ಸಂಖ್ಯೆ** | **ನಿವೃತ್ತಿ ಹೊಂದಿದ ದಿನಾಂಕ** | **ಷರಾ** |
|---|---|---|---|
| ಕೆ.ವೆಂಕಟರಮಣ ಹೆಬ್ಬಾರ್, ಶಾಖಾಧಿಕಾರಿ, ಕರ್ನಾಟಕ ಮಾಹಿತಿ ಆಯೋಗ, (ಗುತ್ತಿಗೆ ಆಧಾರ) | ಎ–೫೨/೧ ಜೀವನ್ ಭೀಮಾನಗರ | 30-4-07 | ನಿವೃತ್ತಿಯ ನಂತರ ವಸತಿಗೃಹದಲ್ಲಿ ವಾಸ ಮುಂದುವರಿಸಲು ನಿಯಮದಲ್ಲಿ ಅವಕಾಶ ವಿಲ್ಲದೇ ಇರುವ ಕಾರಣ ವಸತಿಗೃಹವನ್ನು ವಶಕ್ಕೆ ತೆಗೆದುಕೊಳ್ಳಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ವಿಭಾಗಾಧಿಕಾರಿಯವರಿಗೆ ಪತ್ರಬರೆಯುವ ಬಗ್ಗೆ ತೀರ್ಮಾನಿಸಲಾಯಿತು. |

<table>
<tr><td>7</td><td colspan="4">ಸರ್ಕಾರಿ ವಸತಿಗೃಹದಲ್ಲಿ ವಾಸ ಮಾಡುತ್ತಿದ್ದು ನಿಧನ ನಂತರ ವಸತಿಗೃಹದಲ್ಲಿ ವಾಸ ಮುಂದುವರೆಸಲು ಕೋರಿರುವ ಮನವಿಗಳು</td></tr>
<tr><td></td><td>ಹಂಚಿಕೆದಾರನ ಹೆಸರು ಮತ್ತು ವಿಳಾಸ</td><td>ವಸತಿಗೃಹ ಸಂಖ್ಯೆ</td><td>ನಿಧನ ಹೊಂದಿದ ದಿನಾಂಕ</td><td>ಷರಾ</td></tr>
<tr><td>1</td><td>ಕೆ.ಆರ್.ನಿಂಗೇಗೌಡ, ಆರೋಗ್ಯ ಇಲಾಖೆ, ಬೆಂಗಳೂರು.</td><td>ಜೆ-೭ ರಾಜಾಜಿನಗರ</td><td></td><td>ನಿಧನದ ನಂತರ ಸದರಿಯವರ ಸಹೋದರಿ ಮಮತ, ಅಟೆಂಡರ್, ವಿಕ್ಟೋರಿಯಾ ಆಸ್ಪತ್ರೆ ಇವರಿಗೆ ವಸತಿಗೃಹ ಬದಲಾವಣೆ ಯಾಗಿದ್ದು, ಪ್ರಸ್ತುತ ಸರ್ಕಾರದ ಆದೇಶದಂತೆ ವಾಸದ ಅವಧಿಯನ್ನು ೩೧-೩-೨೦೧೦ರ ವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು.</td></tr>
<tr><td>8</td><td colspan="3">ಸರ್ಕಾರಿ ವಸತಿಗೃಹ ಹಂಚಿಕೆ ಕೋರಿ ಸರ್ಕಾರಿ ನೌಕರರಲ್ಲದವರ ಮನವಿಗಳು</td><td>ಸರ್ಕಾರಿ ಆದೇಶದನ್ವಯ ಸರ್ಕಾರಿ ನೌಕರರಲ್ಲದವರಿಗೆ ನಿಯಮಾವಳಿಯಲ್ಲಿ ವಸತಿಗೃಹ ಹಂಚಿಕೆ ಮಾಡಲು ಅವಕಾಶವಿಲ್ಲದ ಕಾರಣ ಸದರಿಯವರ ಮನವಿಗಳನ್ನು ಪರಿಗಣಿಸಬಾರದೆಂದುಸಭೆಯಲ್ಲಿ ತೀರ್ಮಾನಿಸಲಾಯಿತು.</td></tr>
<tr><td>9</td><td colspan="3">ಜೀವನ್ ಭೀಮಾನಗರ ಸರ್ಕಾರಿ ವಸತಿಗೃಹದಲ್ಲಿ ವಾಸಿಸುತ್ತಿದ್ದು ನೆಲ ಮಹಡಿಗೆ ಬದಲಾಯಿಸಲು ಕೋರಿರುವ ಮನವಿಗಳು<br><br>೧. ವೈ.ಜಗನ್ನಾಥ ಎ-೧೦೦/೩ ರಿಂದ ೧೦೦/೧<br><br>೨. ಮಹಮ್ಮದ ಜಿಶಾನ ಅಲಿಖಾನ್ ೫೦/೩-ನೆಲಮಹಡಿ</td><td>ಸರ್ಕಾರಿ ಆದೇಶದನ್ವಯ ಜೀವನ್ ಭೀಮಾನಗರ ವಸತಿಗೃಹಗಳ ನೆಲ ಮಹಡಿ ಹಾಗೂ ಮೊದಲನೇ ಮಹಡಿಗೆ ಮೂಲವೇತನವನ್ನು ನಿಗದಿಗೊಳಿಸಲಾಗಿದ್ದು ಅದಕ್ಕಿಂತ ಕಡಿಮೆ ಇರುವ ಮೂಲವೇತನದಾರರಿಗೆ ಬದಲಾವಣೆಗೆ ಅವಕಾಶವಿಲ್ಲದ ಕಾರಣ ಸದರಿಯವರ ಮನವಿಗಳನ್ನು ಪರಿಗಣಿಸಬಾರದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.</td></tr>
<tr><td>10</td><td colspan="4">ಬಿ ಗುಂಪಿನ ಸರ್ಕಾರಿ ವಸತಿಗೃಹದಲ್ಲಿದ್ದು ಕೆಲವೊಂದು ಕೌಟುಂಬಿಕ ಕಾರಣಗಳ ಹಿನ್ನೆಲೆಯಲ್ಲಿ ಸಿ ಗುಂಪಿನ ವಸತಿಗೃಹಕ್ಕೆ ಬದಲಾವಣೆ ಮಾಡುವಂತೆ ಕೋರಿರುವ ಮನವಿಗಳು.</td></tr>
<tr><td></td><td colspan="4">ಹೆಸರು ಮತ್ತು ವಿಳಾಸ<br>ಹಂಚಿಕೆಯಾಗಿರುವ ವಸತಿಗೃಹ ಸಂಖ್ಯೆ<br>ಕೋರಿರುವ ಸಂಖ್ಯೆ<br>ಷರಾ<br><br>ಶ್ರೀ ಕೆ.ಎ.ರವೀಂದ್ರನಾಥ<br>ಕೋರಮಂಗಲ<br>ಎ-೨೫/೨ ಜೀವನ್ ಭೀಮಾನಗರ<br>ಸದರಿಯವರ ಕೋರಿಕೆಯನ್ನು ಪರಿಗಣಿಸಬಹುದಾಗಿ ಸಭೆಯಲ್ಲಿ ತೀರ್ಮಾನಿಸಲಾಯಿತು.</td></tr>
<tr><td></td><td colspan="4">ಉಳಿಕೆ ಖಾಲಿ ಇರುವ ವಸತಿಗೃಹಗಳನ್ನು ಜೇಷ್ಠತಾನುಸಾರ ವರ್ಗವಾರು ಹಂಚಿಕೆ ಮಾಡಲು ತೀರ್ಮಾನಿಸಲಾಯಿತು. (ಅನುಬಂಧ-೧)</td></tr>
</table>

ಅಧ್ಯಕ್ಷರು ಹಾಗೂ ಮುಖ್ಯ ಇಂಜಿನಿಯರ್
ಸಂಪರ್ಕ ಮತ್ತು ಕಟ್ಟಡಗಳು(ದ)
ಬೆಂಗಳೂರು

ಸದಸ್ಯರು ಹಾಗೂ ಬೆಂಗಳೂರು ನಗರ
ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕಸಹಾಯಕರು,
ಬೆಂಗಳೂರು

ಸದಸ್ಯರು ಹಾಗೂ ಅಧ್ಯಕ್ಷರು,
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ
ಬೆಂಗಳೂರು

ಸದಸ್ಯ ಕಾರ್ಯದರ್ಶಿ ಹಾಗೂ
ಅಧೀಕ್ಷಕ ಇಂಜಿನಿಯರ್, ಕಟ್ಟಡಗಳ ವೃತ್ತ,
ಬೆಂಗಳೂರು